ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದೂ. **080-22372738** E-mail: nregs-ka@nic.in

ಸಂ.ಗ್ರಾಅಪ 418 ಉಖಾಯೋ 2012 ದಿನಾಂಕ: 24-11-2015

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು,

ಮಾನ್ಯರೇ

| | |
|---|---|
| ವಿಷಯ: | ರಾಜ್ಯದ 27 ಜಿಲ್ಲೆಗಳ 136 ಬರಪೀಡಿತ ತಾಲ್ಲೂಕುಗಳ ಪ್ರದೇಶಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಹೆಚ್ಚುವರಿ ಮಾನವ ದಿನಗಳನ್ನು ಸೃಜನೆಮಾಡಿ ಹೆಚ್ಚುವರಿಯಾದ 50 ಉದ್ಯೋಗ ದಿನಗಳನ್ನು 100 ದಿನಗಳನ್ನು ಪೂರೈಸಿರುವ ಕುಟುಂಬಗಳಿಗೆ ಒದಗಿಸುವ ಕುರಿತು. |
| ಉಲ್ಲೇಖ | 1. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳು ಇವರ ಪತ್ರದ ಸಂಖ್ಯೆ J-11018 /1/ 22015 MGNREGA-IV, ದಿನಾಂಕ: 21-09-2015.<br>2. ಸರ್ಕಾರದ ಪತ್ರದ ಸಂಖ್ಯೆ ಗ್ರಾಅಪ 418 ಉಖಾಯೋ 2012, ದಿನಾಂಕ: 14-09-2015 ಮತ್ತು ಸಮ ಸಂಖ್ಯೆಯ ದಿನಾಂಕ: 19-08-2015.<br>3. ಸರ್ಕಾರದ ಪತ್ರದ ಸಂಖ್ಯೆ ಗ್ರಾಅಪ 418 ಉಖಾಯೋ 2012, ದಿನಾಂಕ: 17-10-2015. |

--

ತಮಗೆ ತಿಳಿದಂತೆ ಉಲ್ಲೇಖ(1)ರಲ್ಲಿ ಕೇಂದ್ರ ಸರ್ಕಾರವು 50 ಉದ್ಯೋಗದಿನಗಳನ್ನು ಹೆಚ್ಚುವರಿಯಾಗಿ ಕೆಲವು ಷರತ್ತುಗಳೊಂದಿಗೆ ಆದೇಶಮಾಡಿ ನೀಡಿರುತ್ತದೆ. ನರೇಗಾ ತಂತ್ರಾಂಶದಲ್ಲಿ ಗ್ರಾಮೀಣ ಕುಟುಂಬಗಳು 100ದಿನಗಳನ್ನು ಪೂರೈಸಿ ಹೆಚ್ಚುವರಿಯಾಗಿ ಕೆಲಸಮಾಡಿರುವ ವಿವರಗಳ ದತ್ತಾಂಶಗಳನ್ನು ನಮೂದಿಸಲು ಕೇಂದ್ರಸರ್ಕಾರವು ಅವಕಾಶ ಕಲ್ಪಿಸಿರುತ್ತದೆ. (ನರೇಗಾ ತಂತ್ರಾಂಶದಲ್ಲಿ 100 ದಿನಗಳಿಂದ 150ದಿನಗಳಿಗೆ ಹೆಚ್ಚಾಗಿರುವ ಉದ್ಯೋಗ ದಿನಗಳ ವಿವರಗಳನ್ನು ನಮೂದಿಸಲು enable ಮಾಡಲಾಗಿರುತ್ತದೆ.

ಇತ್ತೀಚೆಗೆ ದಿನಾಂಕ: 21-11-2015ರಂದು ಹೈದರಾಬಾದ್‌ನಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರು ನಡೆಸಿರುವ ಕಾರ್ಯಾಗಾರದಲ್ಲಿ ಯಶೋಗಾಥೆಗಳ ಮೇಲೆ ಚರ್ಚೆಮಾಡುವ ಸಮಯದಲ್ಲಿ ಇನ್ನು ಮುಂದೆ ರಾಜ್ಯಗಳಿಗೆ ಮುಂದಿನ ಅನುದಾನವನ್ನು ಬಿಡುಗಡೆ ಮಾಡುವುದು ಹೆಚ್ಚಾಗಿ ಉತ್ಪಾದಿಸಲಾದ ಮಾನವ ದಿನಗಳು ಮತ್ತು ಬರಗಾಲ ಪೀಡಿತ ತಾಲ್ಲೂಕುಗಳ ಪ್ರದೇಶಗಳಲ್ಲಿ ಅಕುಶಲ ಉದ್ಯೋಗವನ್ನು 100 ದಿನಗಳಿಗೆ ಮೇಲ್ಪಟ್ಟು ಪೂರೈಸಿರುವ ಕುಟುಂಬಗಳಿಗೆ ಸಾಕಷ್ಟು ಹೆಚ್ಚುವರಿಯಾಗಿ 50 ದಿನಗಳನ್ನು ಒದಗಿಸಿರುವ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಮತ್ತು ನಂಟುಮಾಡಲಾಗಿರುತ್ತದೆ. ಈ ನಿಟ್ಟಿನಲ್ಲಿ ಬರಗಾಲದಲ್ಲಿ ಯಾವ ಯಾವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕು ಎಂಬುದನ್ನು ಸರ್ಕಾರದಿಂದ ಈಗಾಗಲೇ ತಮ್ಮಲ್ಲರಿಗೆ ತಿಳಿಸಲಾಗಿರುತ್ತದೆ. ಆದುದರಿಂದ ಬರಗಾಲಕ್ಕೆ ಸೂಚಿಸಿದಕಾಮಗಾರಿಗಳನ್ನು ಬರಪೀಡಿತ ಪ್ರದೇಶಗಳಲ್ಲಿ ಸಮರೋಪ

ಹಾದಿಯಲ್ಲಿ ಅನುಷ್ಠಾನಗೊಳಿಸಿ 100ದಿನಗಳಿಗೆ ಮೇಲ್ಪಟ್ಟು ಪೂರೈಸಿ ಅಗತ್ಯವಿರುವ ಕುಟುಂಬಗಳಿಗೆ ಹೆಚ್ಚುವರಿ 50 ದಿನಗಳ ಅಕುಶಲ ಉದ್ಯೋಗವನ್ನು ಒದಗಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಈ ಮೂಲಕ ತಮಗೆ ತಿಳಿಸಿದೆ.

ಮೇಲ್ಕಂಡ ಅಂಶಗಳನ್ನು ಆದ್ಯತೆ ಮೇರೆಗೆ ಪರಿಗಣಿಸಿ ಹೆಚ್ಚಿನ ಮಾನವದಿನಗಳನ್ನು ಉತ್ಪಾದಿಸುವ ಕಡೆಗೆ ಗಮನ ಹರಿಸಿ ಕೇಂದ್ರ ಸರ್ಕಾರದಿಂದ ಮುಂದಿನ ಕಂತಿನ ಅನುದಾನವನ್ನು ರಾಜ್ಯ ಸರ್ಕಾರವು ಸುಲಲಿತವಾಗಿ ಪಡೆಯಲು ತಾವು ಯೋಜನೆಯಡಿ ಸಮುದಾಯ ಕಾಮಗಾರಿಗಳನ್ನು ಮತ್ತು ವ್ಯಕ್ತಿಗತ ಫಲಾನುಭವಿಗಳ ಕಾಮಗಾರಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಅನುಷ್ಠಾನಗೊಳಿಸಿ ಯೋಜನೆಯ ಯಶಸ್ವಿಗೆ ಕಾರ್ಯೋನ್ಮುಖರಾಗುವಿರಿ ಎಂದು ಆಶಿಸುತ್ತೇನೆ.

ತಮ್ಮ ವಿಶ್ವಾಸಿ,

(ಮುನೀಶ್ ಮೌದ್ಗಿಲ್)
ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

*ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ:*

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತಕಾರ್ಯದರ್ಶಿಗಳಿಗೆ
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತಕಾರ್ಯದರ್ಶಿಗಳು ಇವರ ಆಪ್ತ ಕಾರ್ಯದರ್ಶಿಗಳಿಗೆ
6. ವಿಶೇಷ ಆಯುಕ್ತರು ಎಮ್.ಜಿ.ಎನ್.ಆರ್.ಇ.ಜಿ.ಎ/ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
7. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ಗ್ರಾಮೀಣಾಭಿವೃದ್ಧಿಯ ರಾಜ್ಯ ಸಂಸ್ಥೆ, ಲಲಿತಮಹಲ್ ರಸ್ತೆ, ಮೈಸೂರು-570011
8. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳು
9. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು
10. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಆಯುಕ್ತಾಲಯದ ಎಲ್ಲಾ ಅಧಿಕಾರಿಗಳಿಗೆ
11. ರಾಜ್ಯದ ಎಲ್ಲಾ ಜಿಲ್ಲೆಗಳ ಒಂಬುಡ್ಸ್‌ಮನ್‌ಗಳಿಗೆ
12. ವಿಶೇಷಾಧಿಕಾರಿಗಳು, ಗಣಕ ಯಂತ್ರ ಕೋಶ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸದರಿ ಮಾಹಿತಿಯನ್ನು ಇಲಾಖಾ ಅಂತರ್ ಜಾಲದಲ್ಲಿ ಅಳವಡಿಸಲು ಕೋರಿದೆ.
13. ಶ್ರೀ. ವೈ. ಮಹಾಂಕಾಳಪ್ಪ ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳವರ ಮಾಹಿತಿಗಾಗಿ ಹಾಗೂ ಇದನ್ನು ಕರ್ನಾಟಕ ವಿಕಾಸದಲ್ಲಿ ಪ್ರಕಟಿಸಲು ಕೋರಿದೆ.
14. M/s Effia Technologies, ಅವರಿಗೆ www.end2endsolutions.comನಲ್ಲಿ ಪ್ರಕಟಿಸಲು/ಅಳವಡಿಸಲು ಕೋರಿದೆ.
15. ಹೆಚ್ಚಿನ ಪ್ರತಿಗಳು/ಮಹಾ ಕಡತಕ್ಕೆ